ದಿಃ 18-01-2016 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದಿನ ವಿಚಾರಣೆಗೆ ಒಳಪಡಿಸಲಾಯಿತು.

ಪಾಟೀ ಸವಾಲುಃ ತೀರ್ಪುರುಣಿ ಪರವಾಗಿ ಶ್ರೀ ಎಲ್.ಎಸ್.ಎ. ವಕೀಲರಿಂದ.

ನಮ್ಮ ತಂದೆ ಪರಶುರಾಮ ಜಾವಳಕರ ಇವರಿಗೆ ಅವರನ್ನು ಸೇರಿಕೊಂಡು 4 ಜನ ಅಣ್ಣ-ತಮ್ಮಂದಿರು. 4 ಜನ ಅಣ್ಣ-ತಮ್ಮಂದಿರು ಬೇರೆ ಬೇರೆಯಾಗಿ ವಾಸವಾಗಿದ್ದಾರೆ. ಅವರೆಲ್ಲರೂ ಕುಟುಂಬ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಜಾರಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿಯೇ ಸದ್ರಿ ವಿಭಾಗ ಮಾಡಿಕೊಳ್ಳಲಾಗಿದೆ. ಖರೀದಿ ಕಾಗದ ಮಾಡಿಕೊಡುವಂತೆ ತೀರ್ಪುರುಣಿಯು 2008 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ರಾಜಿ ಡಿಕ್ರಿಯ ವಿರುದ್ಧ ನನ್ನ ತಂದೆ ಅಪೀಲು ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ಅಪೀಲು ವಜಾಗೊಂಡ ಬಗ್ಗೆ ನನಗೆ ಗೊತ್ತಿಲ್ಲ. ಅಪೀಲು ವಜಾಗೊಂಡ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 2ನೇ ಅಪೀಲು ಸಲ್ಲಿಸಿದ್ದಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ನಮ್ಮ ಚಿಕ್ಕಪ್ಪಂದಿರು ಈ ಅರ್ಜಿ ಸಲ್ಲಿಸುವಂತೆ ಹೇಳಿದ್ದರಿಂದ ನಾವು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಒಟ್ಟು ಸದ್ರಿ ಸರ್ವೆ ನಂಬರಿನಲ್ಲಿ 7 ಎಕರೆ 2 ಗುಂಟೆಯಷ್ಟು ಆಸ್ತಿ ಇರಬಹುದು. ದಾವಾ ಸ್ವತ್ತು ಎ.ಪಿ.ಎಂ.ಸಿ. ಎದುರಿನಲ್ಲಿ ಎಸ್.ಎಲ್. ಘೋಟ್ನೇಕರ ಇವರ ಮನೆಯಿಂದ ಪ್ರಾರಂಭವಾಗುತ್ತದೆ ಎಂದರೆ ಸರಿ. ಸದ್ರಿ ಸ್ವತ್ತು ಸಾಗುವಳಿ ಭೂಮಿ. ಸದ್ರಿ ಸ್ವತ್ತಿನಲ್ಲಿ ವಾಸದ ಮನೆ ಇದೆ ಎಂದರೆ ಸರಿಯಲ್ಲ, ದನಗಳನ್ನು ಕಟ್ಟುವ ಮನೆಯಿದೆ. ಸದ್ರಿ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ದನಗಳನ್ನು ನೋಡಿಕೊಳ್ಳುವ ಸಲುವಾಗಿ ಅಲ್ಲಿ ಉಳಿಯುತ್ತೇವೆ ಎನ್ನುತ್ತಾರೆ. ದಾವಾ ಸರ್ವೆ ನಂಬರ್‌ನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ 16 ಎಕರೆ ಜಮೀನು ಇದೆ. ದಾವಾ ಸ್ವತ್ತನ್ನು ಅನ್ಯಸಂಕ್ರಮಣ ಮಾಡಿ ಪ್ಲಾಟ್‌ಗಳನ್ನಾಗಿ ಮಾಡಿ ಮಾರಾಟ ಮಾಡುವ ಇರಾದೆಯನ್ನು ನಮ್ಮ ತಂದೆ ಹೊಂದಿದ್ದರು ಎಂದರೆ ಸರಿಯಲ್ಲ. ದಾವಾ ಬ್ಲಾಕ್ ನಂಬರಿನಲ್ಲಿ ಕರಾರು ಪತ್ರವನ್ನಾಗಲೀ ಕ್ರಯಪತ್ರವನ್ನಾಗಲೀ ಮಾಡಿಕೊಟ್ಟಿಲ್ಲ. ನಮ್ಮ ತಂದೆ ಹಾಗೂ ಚಿಕ್ಕಂಪದಿರು ದಾವಾಸ್ತಿಯ ಪೈಕಿ 20 ಗುಂಟೆ ಆಸ್ತಿಯನ್ನು ಶಾಂತಾರಾಮ ಪಟ್ವೇಕರ ಇವರಿಗೆ ಮಾರಾಟ ಮಾಡಿದ್ದಾರೆಂದರೆ ಅದು ನನಗೆ ಗೊತ್ತಿಲ್ಲ. ಅದೇ ರೀತಿ ಇನ್ನು 1 ಎಕರೆ ಆಸ್ತಿಯನ್ನು ಎಸ್.ಎಲ್. ಘೋಟ್ನೇಕರ ಇವರ ಛತ್ರಪತಿ ಶಿವಾಜಿ ಎಜ್ಯುಕೇಶನ್ ಟ್ರಸ್ಟ್ ಇವರಿಗೆ ಮಾರಾಟ ಮಾಡಿದ್ದಾರೆಂದರೆ ಅದು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ದಿಃ 10-06-2014 ರ ಕ್ರಯಪತ್ರ ತಿದ್ದುಪಡಿ ಪತ್ರವನ್ನು ತೋರಿಸಲಾಗಿ, ಅದರಲ್ಲಿ ಸಾಕ್ಷಿದಾರರ ಸ್ಥಳದಲ್ಲಿರುವ ನಾಮದೇವ ಸಹಿ ಯಾರದ್ದು ಎಂದು ಕೇಳಲಾಗಿ ಅದು ತನ್ನ ಸಹಿ ಎನ್ನುತ್ತಾರೆ. ಸದ್ರಿ ಕ್ರಯಪತ್ರದ ತಿದ್ದುಪಡಿ ಪತ್ರವನ್ನು ನಿಶಾನೆ ಆರ್. 1 ಎಂದು ಸಾಕ್ಷಿ ಗುರ್ತಿಸಿದ ತನ್ನ ಸಹಿಯನ್ನು ನಿ.ಆರ್. 1-ಎ ಎಂದು ಗುರ್ತಿಸಲಾಯಿತು.

ಛತ್ರಪತಿ ಶಿವಾಜಿ ಎಜ್ಯುಕೇಶನ್ ಟ್ರಸ್ಟ್ ಇವರಿಗೆ ಮತ್ತು ಶಾಂತಾರಾಮ ಡೊಂಗ್ರು ಪಟ್ವೇಕರ ಇವರಿಗೆ ಮಾರಾಟ ಮಾಡಿರುವ ಆಸ್ತಿಗೆ ಸಂಬಂಧಿಸಿದಂತೆ ನಾವು ಯಾವುದೇ ತಕರಾರು ಮಾಡಿಲ್ಲ, ಕುಟುಂಬದ ಅಡಚಣೆಗಳಿಗೋಸ್ಕರ ಅರ್ಜಿಯ ಸ್ವತ್ತನ್ನು ನಮ್ಮ ತಂದೆಯವರು ಹಾಗೂ ಅವರ ಅಣ್ಣ-

ತಮ್ಮಂದಿರು ಸೇರಿ ತೀರ್ಪುರುಣಿಗೆ ಕರಾರು ಪತ್ರದ ಮೂಲಕ ಮಾರಾಟ ಮಾಡಿದ್ದೇವೆ ಎಂದರೆ ಅದು ಸರಿಯಲ್ಲ. ದಾವಾಸ್ತಿಯ ನಿಖರ ಬೆಲೆ ನನಗೆ ಗೊತ್ತಿಲ್ಲ. ಈಗ ಹೆಚ್ಚು ಬೆಲೆ ಬಂದಿದ್ದರಿಂದ ಹಿಂದಿನ ಕರಾರು ಪತ್ರವನ್ನು ಮುಚ್ಚಿಟ್ಟು ಈಗ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ತಕರಾರು ಸಲ್ಲಿಸಲು ಈ ಪ್ರಕರಣದಲ್ಲಿ ನಮಗಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಮಾಜಕ್ಕೆ ವಿರೋಧ ಮಾಡುವವರ ಮಾತನ್ನು ಕೇಳಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> –ಇಲ್ಲ-.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)**

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.